ಕರ್ನಾಟಕ ವಿಧಾನ ಸಭೆ

308 ಶ್ರೀ ಜಯಚಂದ್ರ ಟಿ.ಬಿ.(ಶಿರಾ)

ಕಂದಾಯ ಸಚಿವರು

ಅ) ತಾಲ್ಲೂಕು ಪುನರ್ ರಚನೆ ಸಮಿತಿಗಳ ವರದಿಯನ್ನಾಧರಿಸಿ ಹೊಸ ತಾಲ್ಲೂಕುಗಳ ರಚನೆ ಮಾಡುವ ಮೂಲಕ ಯೋಚನೆ ಸರ್ಕಾರಕ್ಕೆ ಇದೆಯೇ;

ವರದಿ ಬಂದಿದ್ದು ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕಿದೆ.

ಆ) ತುಮಕೂರು ಜಿಲ್ಲೆಯ ಹುಳಿಯೂರು, ಹಿಂದೆ ತಾಲ್ಲೂಕು ಕೇಂದ್ರವಾಗಿದ್ದು, ಮತ್ತೆ ತಾಲ್ಲೂಕಾಗುವ ಎಲ್ಲಾ ರೀತಿಯ ಅರ್ಹತೆಯನ್ನು ಪಡೆದಿದ್ದು, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ಮತ್ತು ಹಿರಿಯೂರಿನ ಕೆಲವು ಭಾಗಗಳು ಸೇರ್ಪಡಿಸುವುದರಿಂದ ತಾಲ್ಲೂಕು ರಚನೆಗೆ ಸಾಧ್ಯವಿರುವುದರಿಂದ ಆಡಳಿತ ಮತ್ತು ಜನರ ಹಿತದೃಷ್ಟಿಯಿಂದ ಸರ್ಕಾರ ಕ್ರಮ ಕೈಗೊಳ್ಳವುದೇ?

ರಾಜ್ಯದಲ್ಲಿ ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವ ಸಂಬಂಧ ಸಾಧಕ ಬಾಧಕಗಳನ್ನು ಪರಿಶೀಲಿಸಲು ಇದುವರೆಗೆ ಒಟ್ಟು 4 ಸಮಿತಿಗಳನ್ನು ನೇಮಿಸಲಾಗಿತ್ತು. ಯಾವುದೇ ಸಮಿತಿಯು ತುಮಕೂರು ಜಿಲ್ಲೆಯ ಹುಳಿಯಾರನ್ನು ಹೊಸ ತಾಲ್ಲೂಕು ಮಾಡುವ ಬಗ್ಗೆ ಶಿಫಾರಸ್ಸು ಮಾಡಿರುವುದಿಲ್ಲ.

ಕರ್ನಾಟಕ ವಿಧಾನ ಸಭೆ

309 ಶ್ರೀ ಜಯಚಂದ್ರ ಟಿ.ಬಿ.(ಶಿರಾ)

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.

ಅ) ಕರ್ನಾಟಕ ಉದ್ಯೋಗ ಮಿತ್ರಕ್ಕೆ ದಿನಾಂಕ 1.7.2008 ರಿಂದ ಇಲ್ಲಿಯವರೆಗೆ ಏಕಗವಾಕ್ಷಿ (ಸಿಂಗಲ್ ವಿಂಡೊ) ಮತ್ತು ಹೈ ಪವರ್ ಸಮಿತಿಗೆ ಯೋಜನೆಗಳ ಅನುಮೋದನೆಯನ್ನು ಕೋರಿ ಬಂದ ಅರ್ಜಿಗಳೆಷ್ಟು; ಅವುಗಳಲ್ಲಿ ಮಂಜೂರಾತಿ ನೀಡಿರುವ ಅರ್ಜಿಗಳೆಷ್ಟು; ತಿರಸ್ಕರಿಸಿರುವ ಅರ್ಜಿಗಳೆಷ್ಟು; ಬಾಕಿ ಉಳಿದಿರುವ ಅರ್ಜಿಗಳೆಷ್ಟು; (ಸಂಪೂರ್ಣ ವಿವರ ನೀಡುವುದು);

ದಿನಾಂಕ 1.7.2008 ರಿಂದ ಇಲ್ಲಿಯವರೆಗೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಅನುಮೋದನೆಗೆ (ರೂ.3.00 ರಿಂದ ರೂ.50.00 ಕೋಟಿ ಬಂಡವಾಳ ಹೂಡಿಕೆಯ) 504ಅರ್ಜಿಗಳು ಸ್ವೀಕೃತವಾಗಿದ್ದು ಅವುಗಳಲ್ಲಿ 309 ಯೋಜನೆಗಳು ಅನುಮೋದನೆಗೊಂಡಿರುತ್ತದೆ. 181 ಅರ್ಜಿಗಳು ವಿವಿಧ ಕಾರಣಗಳಿಗಾಗಿ ಬಾಕಿ ಉಳಿದಿರುತ್ತದೆ. ವಿವರಗಳನ್ನು ಇದರೊಂದಿಗೆ ಅನುಬಂಧ – ಅ ನಲ್ಲಿ ಲಗತ್ತಿಸಲಾಗಿದೆ. 181 ಅರ್ಜಿಗಳಲ್ಲಿ 170 ಅರ್ಜಿಗಳು ಕೈಗಾರಿಕಾ ಪ್ರದೇಶಗಳಲ್ಲಿ ಭೂಮಿ ಲಭ್ಯವಿಲ್ಲದ ಕಾರಣ ಬಾಕಿ ಉಳಿದಿರುತ್ತವೆ. ಈ ಕೈಗಾರಿಕಾ ಪ್ರದೇಶಗಳ ಭೂ ಸ್ವಾಧೀನ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು ಮುಂದಿನ ಸಭೆಗಳಲ್ಲಿ ಅನುಮೋದನೆಗೆ ಪರಿಗಣಿಸಲಾಗುವುದು. ಅಲ್ಲದೆ 14 ಪ್ರಸ್ತಾವನೆಗಳನ್ನು ದಿನಾಂಕ 26.6.2009 ರಂದು